ಕರ್ನಾಟಕ ಸರ್ಕಾರ

ಸಂಖ್ಯೆ: ಸಿಆಸುಇ 37 ಚುಸಿಆ 2013

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಧಾನ ಸೌಧ,
ಬೆಂಗಳೂರು, ದಿನಾಂಕ 20-03-2013.

**ಸುತ್ತೋಲೆ**

ವಿಷಯ: ಕರ್ನಾಟಕ ವಿಧಾನಸಭೆ ಸಾರ್ವತ್ರಿಕ ಚುನಾವಣೆ, 2013 - ಸಹಕಾರ ಮತ್ತು ಸಹಾಯವನ್ನು ಚುನಾವಣಾ ಪ್ರಾಧಿಕಾರಿಗಳಿಗೆ ನೀಡುವ ಬಗ್ಗೆ.

---

ಭಾರತ ಚುನಾವಣಾ ಆಯೋಗವು ಕರ್ನಾಟಕ ವಿಧಾನಸಭೆ ಸಾರ್ವತ್ರಿಕ ಚುನಾವಣೆ, 2013ರ ವೇಳಾ ಪಟ್ಟಿಯನ್ನು ಪ್ರಕಟಿಸಿದೆ. ಸದರಿ ಕಾರ್ಯಕ್ರಮದ ಪ್ರಕಾರ ಈ ಸಾರ್ವತ್ರಿಕ ಚುನಾವಣೆಯ ಮತದಾನವು ದಿನಾಂಕ 05-05-2013ರಂದು ಮತದಾನ ನಡೆಸಲಾಗುವುದು ಮತ್ತು ದಿನಾಂಕ 08-05-2013ರಂದು ಮತ ಎಣಿಕೆ ಕಾರ್ಯ ನಡೆಸಲಾಗುವುದು. ರಾಜಕೀಯ ಪಕ್ಷಗಳು, ಅಭ್ಯರ್ಥಿಗಳು ಹಾಗೂ ರಾಜ್ಯ ಸರ್ಕಾರದ ತೀವ್ರ ಅನುಸರಣೆಗಾಗಿ ಮಾದರಿ ನೀತಿ ಸಂಹಿತೆಯು ಯಾವುದೇ ಜಿಲ್ಲೆಯ ವಿಧಾನಸಭಾ ಕ್ಷೇತ್ರವು ಪೂರ್ತಿ ಅಥವಾ ಭಾಗಶ: ಚುನಾವಣೆಗೆ ಒಳಗೊಂಡಿದ್ದಲ್ಲಿ, ಇಡೀ ಜಿಲ್ಲೆಗೆ ಅನ್ವಯಿಸುತ್ತದೆ. ಅದರಂತೆ, ರಾಜ್ಯದ ಎಲ್ಲಾ ಜಿಲ್ಲೆಗಳಿಗೆ ಪೂರ್ಣವಾಗಿ ಅನ್ವಯಿಸುತ್ತದೆ ಹಾಗೂ ಜಾರಿಯಲ್ಲಿರುತ್ತದೆ. ಭಾರತ ಚುನಾವಣಾ ಆಯೋಗವು ನಿಗದಿಪಡಿಸಿರುವ ಮಾದರಿ ನೀತಿ ಸಂಹಿತೆಯು ದಿನಾಂಕ 20-03-2013 ರಿಂದ ರಾಜ್ಯದಾದ್ಯಂತ ಎಲ್ಲಾ ಜಿಲ್ಲೆಗಳಲ್ಲೂ ಜಾರಿಗೆ ಬಂದಿರುತ್ತದೆ. ಈ ಸಾರ್ವತ್ರಿಕ ಚುನಾವಣೆಯನ್ನು ಸುಗಮವಾಗಿ ಮತ್ತು ಮುಕ್ತ ಹಾಗೂ ನಿಷ್ಪಕ್ಷಪಾತವಾಗಿ ನಡೆಸಲು ಚುನಾವಣಾ ಪ್ರಾಧಿಕಾರಿಗಳಿಗೆ ಕೆಳಕಂಡ ವಿಷಯಗಳಲ್ಲಿ ವಿವಿಧ ಸರ್ಕಾರಿ ಇಲಾಖೆಗಳ ಸ್ಥಳೀಯ ಸಂಸ್ಥೆಗಳ ಸಹಕಾರ ಮತ್ತು ಸಹಾಯದ ಅವಶ್ಯಕತೆ ಇದೆ.

**1. ಚುನಾವಣೆಗಳಿಗಾಗಿ ಗೊತ್ತುಪಡಿಸಿದ ಅಧಿಕಾರಿಗಳ ಸೇವೆ:**

ಸದರಿ ಸಾರ್ವತ್ರಿಕ ಚುನಾವಣೆಗಾಗಿ ಸರ್ಕಾರಿ ಅಥವಾ ಸ್ಥಳೀಯ ಸಂಸ್ಥೆಗಳ ನೌಕರರ ಸೇವೆ ಬೇಕೆಂದು ಚುನಾವಣಾ ಪ್ರಾಧಿಕಾರಿಗಳಿಂದ ಕೋರಿಕೆ ಬಂದಲ್ಲಿ ಆದ್ಯತೆಯ ಮೇರೆಗೆ ಅದನ್ನು ಈಡೇರಿಸಬೇಕು.

**2. ಸರ್ಕಾರಿ ನೌಕರರ ವರ್ಗಾವಣೆ / ರಜೆ ಮಂಜೂರಾತಿ:**

ಚುನಾವಣೆ ನಡೆಸುವುದಕ್ಕಾಗಿ ಹೆಚ್ಚಿನ ಸಂಖ್ಯೆಯಲ್ಲಿ ಸರ್ಕಾರಿ ಸೇವೆ ಮತ್ತು ಸ್ಥಳೀಯ ಸಂಸ್ಥೆಗಳ ಸೇವೆಯ ಸಿಬ್ಬಂದಿ ಬೇಕಾಗುವುದು. ಆದ್ದರಿಂದ, ಸಾರ್ವತ್ರಿಕ ಚುನಾವಣೆ ನಡೆಯುವ ಜಿಲ್ಲೆಗಳಿಗೆ ಸಂಬಂಧಿಸಿದಂತೆ, ಚುನಾವಣಾ ಆಯೋಗದೊಡನೆ ಸಮಾಲೋಚಿಸದ ಹೊರತು ಚುನಾವಣೆ ಪೂರ್ಣಗೊಳ್ಳುವವರೆಗೆ ಸದರಿ ನೌಕರರನ್ನು ವರ್ಗಾಯಿಸತಕ್ಕದ್ದಲ್ಲ ಅಥವಾ ತರಬೇತಿಗೆ ಕಳುಹಿಸತಕ್ಕದ್ದಲ್ಲ ಅಥವಾ ಅವರಿಗೆ ಯಾವುದೇ ರೀತಿಯ ರಜೆಯನ್ನು ಮಂಜೂರು ಮಾಡಕೂಡದು. ತುರ್ತು ಸಂದರ್ಭದಲ್ಲಿ

....2.

1-2 ದಿನಗಳ ಮಟ್ಟಿಗೆ ಆಕಸ್ಮಿಕ ರಜೆ ಮಂಜೂರು ಮಾಡಲು ಯಾವ ಆಕ್ಷೇಪಣೆಯಿರುವುದಿಲ್ಲ. ಆದರೆ, ಅಂತಹ ದಿನಗಳಂದು ಯಾವುದೇ ನಿರ್ದಿಷ್ಟ ಉದ್ದೇಶಗಳಿಗಾಗಿ ಆ ನೌಕರರ ಸೇವೆಯು ಅಗತ್ಯ ಇರುವುದಿಲ್ಲವೆಂದು ಖಚಿತಪಡಿಸಿಕೊಳ್ಳುವುದು. ಸಾಮಾನ್ಯ ನಿಯಮಾವಳಿಯಂತೆ ಮಾಡುವ ಮುಂಬಡ್ತಿಯನ್ನು ಹೊರತುಪಡಿಸಿ ತಾತ್ಕಾಲಿಕ ಮುಂಬಡ್ತಿ ನೇಮಕಾತಿಗಳನ್ನು ಸರ್ಕಾರಿ ಅಥವಾ ಸಾರ್ವಜನಿಕ ಉದ್ಯಮಗಳಲ್ಲಿ ಮಾಡಕೂಡದು.

ಚುನಾವಣೆಯ ಕೆಲಸಗಳನ್ನು ನಿರ್ವಹಿಸಲು ನೇರವಾಗಿ ಸಂಬಂಧಿಸಿದ ಹಿರಿಯ ಅಧಿಕಾರಿಗಳನ್ನು ಇತರೆ ಇಲಾಖೆಗಳ ಕೆಲಸಗಳನ್ನು ನಿರ್ವಹಿಸಲು ಹೆಚ್ಚಿನ ಪ್ರಭಾರೆಯಲ್ಲಿಡಬಾರದು.

3. <u>ಆವರಣಗಳು / ಕಟ್ಟಡ ಮುಂತಾದವುಗಳನ್ನು ಒದಗಿಸುವುದು:</u>

ಚುನಾವಣೆ ಸಂಬಂಧದಲ್ಲಿ ಮತಗಟ್ಟೆಗಳನ್ನು ಸ್ಥಾಪಿಸಲು ಅಥವಾ ಚುನಾವಣೆಗಾಗಿ ಬೇಕಾಗುವ ಶಾಲೆ, ಕಾಲೇಜು ಕಟ್ಟಡಗಳನ್ನು ಮತ್ತು ಇತರ ಸರ್ಕಾರಿ ಕಟ್ಟಡಗಳನ್ನು ಅಗತ್ಯ ದುರಸ್ತಿಗಳೊಡನೆ ಸುಸ್ಥಿತಿಯಲ್ಲಿರುವ ಪೀಠೋಪಕರಣಗಳೊಂದಿಗೆ ಒದಗಿಸಬೇಕು.

4. <u>ವಾಹನಗಳನ್ನು ಒದಗಿಸುವುದು:</u>

ಚುನಾವಣೆಗಾಗಿ ಬೇಕಾಗುವ ವಾಹನಗಳನ್ನು ಚುನಾವಣಾ ಪ್ರಾಧಿಕಾರಿಗಳು ಕೋರಿಕೆ ಸಲ್ಲಿಸಿದಾಗ ಒದಗಿಸತಕ್ಕದ್ದು. ಅಂತಹ ವಾಹನಗಳು ಸುಸ್ಥಿತಿಯಲ್ಲಿವೆಯೇ ಎಂಬುದನ್ನು ಖಚಿತಪಡಿಸಿಕೊಳ್ಳುವುದು.

5. <u>ನೀತಿ ಸಂಹಿತೆ:</u>

ಎ) ಅಖಿಲ ಭಾರತ ಸೇವೆಗಳು, ನಡತೆ ನಿಯಮಾವಳಿಗಳು, ಕರ್ನಾಟಕ ನಾಗರೀಕ ಸೇವೆಗಳು (ನಡತೆ) ನಿಯಮಗಳು, 1966 ರಲ್ಲಿ ಇರುವಂತೆ ಮತ್ತು ತತ್ಸಮವಾಗಿ ಅನ್ವಯಿಸುವ ನಿಯಮಗಳಿಗನುಸಾರವಾಗಿ ಯಾವೊಬ್ಬ ಸರ್ಕಾರಿ ನೌಕರನು ಚುನಾವಣೆಗೆ ಸಂಬಂಧಿಸಿದಂತೆ, ಪ್ರಚಾರವನ್ನಾಗಲಿ ಅಥವಾ ಹಸ್ತಕ್ಷೇಪವನ್ನಾಗಲಿ ಅಥವಾ ಪ್ರಭಾವವನ್ನು ಬೀರುವುದಾಗಲಿ ಮಾಡಕೂಡದು. ಮುಖ್ಯವಾಗಿ ಸರ್ಕಾರಿ ನೌಕರರು ನಿಷ್ಠೆಯಿಂದ ನಿಷ್ಪಕ್ಷಪಾತವಾಗಿರುವುದೇ ಅಲ್ಲದೆ ಅದೇ ರೀತಿ ಕಾಣಬೇಕು. ಪ್ರಜಾಪ್ರಾತಿನಿಧ್ಯ ಕಾಯಿದೆ, 1951ರ ಭಾಗ 134ಎ ಕಡೆಗೆ ಗಮನವನ್ನು ಸೆಳೆಯುತ್ತಾ, ಸರ್ಕಾರಿ ಸೇವೆಯಲ್ಲಿರುವ ಯಾವುದೇ ವ್ಯಕ್ತಿ ಚುನಾವಣೆ ಅಥವಾ ಮತದಾನ ಅಥವಾ ಎಣಿಕೆ ಪ್ರತಿನಿಧಿಯಾಗಿ ಚುನಾವಣಾ ಅಭ್ಯರ್ಥಿಯ ಪರ ಕಾರ್ಯ ನಿರ್ವಹಿಸಿದರೆ ಅಂತಹವರಿಗೆ ಮೂರು ತಿಂಗಳ ಸಜಾ ಅಥವಾ ಜುಲ್ಮಾನೆ ಅಥವಾ ಎರಡೂ ಶಿಕ್ಷೆ ವಿಧಿಸಬಹುದಾಗಿದೆ.

ಬಿ) i) ಮಂತ್ರಿಗಳು ಚುನಾವಣಾ ಪ್ರವಾಸ ಕೈಗೊಂಡಾಗ ಸರ್ಕಾರಿ ಅಧಿಕಾರಿಗಳ ವರ್ತನೆ ಬಗ್ಗೆ ಹಲವಾರು ಸೂಚನೆಗಳನ್ನು ಭಾರತ ಚುನಾವಣಾ ಆಯೋಗ ಹೊರಡಿಸಿದೆ.

ಈಗಾಗಲೇ ಹೇಳಿರುವಂತೆ ಅವುಗಳನ್ನು ಪೂರ್ಣವಾಗಿ ಅನುಸರಿಸಬೇಕು. ಮಂತ್ರಿಗಳು ಮಾಡುವ ಪ್ರವಾಸಗಳು ಚುನಾವಣಾ ಸಭೆಗಳೆಂದು ತೋರುವಂತಿದ್ದರೆ, ಅಧಿಕಾರಿಗಳ ಕಾರ್ಯಾಚರಣೆ, ಕಾನೂನು ಮತ್ತು ಶಾಂತಿ ಪಾಲನೆಗಾಗಿ ಮಾತ್ರ ಸೀಮಿತಗೊಂಡಿರಬೇಕು.

....3.

ii) ಮಂತ್ರಿಗಳು ಪ್ರವಾಸದಲ್ಲಿ ಸರ್ಕಾರಿ ಕೆಲಸಗಳನ್ನು ಮಾತ್ರ ನಿರ್ವಹಿಸುತ್ತಿದ್ದರೆ, ಅವರು ಕೆಲಸವನ್ನು ನಿರ್ವಹಿಸಲು ಅನುಕೂಲವಾಗುವಂತೆ ಎಲ್ಲಾ ವ್ಯವಸ್ಥೆಯನ್ನು ಸಂಬಂಧಪಟ್ಟ ಅಧಿಕಾರಿಗಳು ಅನುವು ಮಾಡಿ ಕೊಡಬೇಕು.

iii) ಅವರು ತಮ್ಮ ಪ್ರವಾಸದಲ್ಲಿ ಮೇಲಿನ ಎರಡು ಅಂಶಗಳ ಬಗ್ಗೆ ಸ್ಪಷ್ಟ ಸೂಚನೆ ನೀಡದಿದ್ದಲ್ಲಿ ಅಥವಾ ಅವರು ತಮ್ಮ ಪ್ರವಾಸ ಕಾರ್ಯಕ್ರಮದ ಪಟ್ಟಿಯಲ್ಲಿ ಏನೂ ವಿವರಗಳನ್ನು ಕೊಡದಿದ್ದಲ್ಲಿ ಈ ಪ್ರವಾಸಗಳು ಚುನಾವಣಾ ಪ್ರವಾಸಗಳೆಂದು ಭಾವಿಸಲಾಗುತ್ತದೆ.

ಮಂತ್ರಿಗಳು ಸಾರ್ವಜನಿಕ ಸಭೆಯಲ್ಲಿ ಭಾಷಣ ಮಾಡುವುದಿದ್ದರೆ, ಆ ಸಭೆಯು ಸರ್ಕಾರಿ ಸ್ವಾಮ್ಯದಿಂದ ನಡೆಯುತ್ತಿದೆಯೇ ಅಥವಾ ಚುನಾವಣಾ ಪ್ರಚಾರದ್ದಾಗಿದೆಯೇ ಎಂಬುದನ್ನು ಆ ಮಂತ್ರಿಗಳೇ ನಿರ್ಧರಿಸಬೇಕಾಗುವುದು. ಆದರೂ, ಚುನಾವಣಾ ಪೂರ್ವದಲ್ಲಿ ನಡೆಯುವ ಸಭೆ ಸಾಮಾನ್ಯ ಚುನಾವಣಾ ಪ್ರಚಾರಕ್ಕೆಂದು ಭಾವಿಸಬೇಕು ಹಾಗೂ ಎಲ್ಲಾ ಸಿದ್ಧತೆಗಳನ್ನು ಮಂತ್ರಿಗಳ ಪರವಾಗಿ ಸಂಬಂಧಪಟ್ಟ ರಾಜಕೀಯ ಪಕ್ಷ, ಸಂಘ ಸಂಸ್ಥೆಗಳೇ ಮಾಡಬೇಕು. ಅದಕ್ಕೆ ಸಂಬಂಧಿಸಿದ ವೆಚ್ಚವನ್ನು ಸಹ ಅವರೇ ಭರಿಸಬೇಕೇ ವಿನಃ ಸಾರ್ವಜನಿಕ ನಿಧಿಯಿಂದ ಭರಿಸತಕ್ಕದ್ದಲ್ಲ. ಚುನಾವಣೆ ಪ್ರವಾಸಗಳ ಸಮಯದಲ್ಲಿ ಸ್ಥಳೀಯ ಸಂಸ್ಥೆಗಳ ವಾಹನಗಳನ್ನು ಬೋರ್ಡ್/ ಕಾರ್ಪೋರೇಶನ್‌ಗಳ ಮುಖ್ಯಸ್ಥರುಗಳು (ರಾಜಕೀಯ ಪಕ್ಷಗಳ ಅಭ್ಯರ್ಥಿಗಳನ್ನು ಸರ್ಕಾರವು ಹೀಗೆ ನೇಮಕ ಮಾಡಿದ್ದಲ್ಲಿ) ಹಾಗೂ ಮಂತ್ರಿಗಳ ಸಿಬ್ಬಂದಿಗಳು ಚುನಾವಣೆ ಮುಗಿಯುವವರೆಗೂ ಉಪಯೋಗಿಸತಕ್ಕದ್ದಲ್ಲ. ಸ್ಥಳೀಯ ಸಂಸ್ಥೆಗಳ ಸದಸ್ಯರುಗಳಿಗೆ ಸಹ ಆಯಾಯ ಸಂಸ್ಥೆಗಳ ವಾಹನಗಳನ್ನು ಯಾವುದೇ ಚುನಾವಣಾ ಉದ್ದೇಶಗಳೆಂದು ಪರಿಗಣಿಸಬಹುದಾದ ಯಾವುದೇ ಉದ್ದೇಶಗಳಿಗೆ ಬಳಸುವುದಕ್ಕೆ ಅನುಮತಿ ನೀಡಕೂಡದು.

ಚುನಾವಣಾ ಪ್ರಚಾರದ ಭಾಗವಾಗಿ ರಾಜಕೀಯ ಪಕ್ಷಗಳು ಮತ್ತು ಅಭ್ಯರ್ಥಿಗಳು ಸಭೆಗಳನ್ನು ನಡೆಸುವ ಮತ್ತು ಮೆರವಣಿಗೆ ಹೋಗುವ ಸಮಯದಲ್ಲಿ ಧ್ವನಿವರ್ಧಕಗಳನ್ನು ಉಪಯೋಗಿಸಲು ಸಂಬಂಧಪಟ್ಟ ಪ್ರಾಧಿಕಾರಿಗಳು ಪರವಾನಗಿ ನೀಡಲು ತೀರ್ಮಾನ ತೆಗೆದುಕೊಳ್ಳುವಾಗ ಸಂಪೂರ್ಣವಾಗಿ ನಿಷ್ಪಕ್ಷಪಾತವಾಗಿರಬೇಕು.

**6. <u>ಸರ್ಕಾರಿ ವಿಮಾನದ ಉಪಯೋಗ / ಹೆಲಿಕಾಪ್ಟರು ಬಳಕೆ:</u>**

ಸರ್ಕಾರಿ ವಿಮಾನವನ್ನು / ಹೆಲಿಕಾಪ್ಟರನ್ನು ವಿಶೇಷ ತುರ್ತು ಸನ್ನಿವೇಶಗಳಲ್ಲಿ ಉದಾಹರಣೆಗೆ ಪ್ರಕೃತಿ ವಿಕೋಪ ಸಮಯ ಹೊರತುಪಡಿಸಿ ಇತರೆ ಯಾವ ಸಂದರ್ಭದಲ್ಲೂ ಚುನಾವಣೆ ಘೋಷಿಸಿದ ದಿನಾಂಕದಿಂದ ಅದು ಮುಕ್ತಾಯವಾಗುವವರೆಗೆ ಉಪಯೋಗಿಸಕೂಡದು.

**7. <u>ಕಾರ್ಯಕ್ರಮದ ಘೋಷಣೆ ಮತ್ತು ಹೊಸ ಕಾಮಗಾರಿಗಳನ್ನು ಕಾರ್ಯಗತಗೊಳಿಸುವುದು:</u>**

ಭಾರತ ಚುನಾವಣಾ ಆಯೋಗವು ಚುನಾವಣೆಗಳನ್ನು ಘೋಷಿಸಿದ ದಿನಾಂಕದಿಂದ ಚುನಾವಣೆಗಳ ಪ್ರಕ್ರಿಯೆಯು ಮುಗಿಯುವವರೆಗೂ, ಚುನಾವಣೆಗಳು ನಡೆಯುತ್ತಿರುವ ಜಿಲ್ಲೆಗಳಲ್ಲಿ ಹೊಸ ಯೋಜನೆ, ವಿದ್ಯುದ್ದೀಕರಣ, ಲೋಕೋಪಯೋಗಿ ಇಲಾಖೆಯ ಹೊಸ ಕೆಲಸಗಳು ಇತ್ಯಾದಿಗಳನ್ನು ಕೈಗೊಳ್ಳಬಾರದು.

....4.

**8.** ಇನ್ನಾವುದಾದರೂ ರೀತಿಯ ಸಹಾಯ, ಅಗತ್ಯವಾದ ನೆರವು ಹಾಗೂ ಸೌಲಭ್ಯಗಳನ್ನು ಚುನಾವಣಾ ಅಧಿಕಾರಿಗಳು ಕೇಳಿದಾಗ ನೀಡಬೇಕು.

**9.** ಈ ಸೂಚನೆಗಳು ತಕ್ಷಣದಿಂದಲೇ ಜಾರಿಗೆ ಬರುವುದು ಮತ್ತು ಇದನ್ನು ಸಂಬಂಧಪಟ್ಟ ಎಲ್ಲಾ ಅಧೀನ ಅಧಿಕಾರಿಗಳಿಗೆ ತಿಳಿಸುವುದು.

10. ಚುನಾವಣಾ ಆಯೋಗವು ಕಾಲಕಾಲಕ್ಕೆ ಹೊರಡಿಸಿರುವ ಸುತ್ತೋಲೆ, ನಿರ್ದೇಶನ ಸೂಚನೆಗಳನ್ನು, ಕಟ್ಟುನಿಟ್ಟಾಗಿ ಪಾಲಿಸುವುದರ ಜೊತೆಗೆ ಅನುಷ್ಠಾನ ತರುವುದರಲ್ಲಿಯೂ ನಿಗಾವಹಿಸಲು ಸೂಚಿಸಿದೆ. ಒಟ್ಟಾರೆಯಾಗಿ ಈ ಉಪ ಚುನಾವಣೆ ನಿಷ್ಪಕ್ಷಪಾತವಾಗಿ, ನಿರ್ಭೀತಿಯಿಂದಲೂ ಹಾಗೂ ಶಾಂತಿಯುತವಾಗಿ ನಡೆಯುವಂತಾಗಲು ಎಲ್ಲರ ಸಹಕಾರ ಪಡೆದುಕೊಂಡು ಸಕಲ ಏರ್ಪಾಡುಗಳನ್ನು ಮಾಡಲು ಸೂಚಿಸಿದೆ. ಯಾವುದೇ ವಿಷಯದಲ್ಲಿ ಅನುಮಾನಗಳು ಬಂದಲ್ಲಿ ಅವುಗಳ ಬಗ್ಗೆ ತಕ್ಷಣವೇ ಮುಖ್ಯ ಚುನಾವಣಾಧಿಕಾರಿಗಳನ್ನಾಗಲೀ ಅಥವಾ ಸಂಬಂಧಪಟ್ಟ ಅಧಿಕಾರಿಗಳನ್ನು ಸಂಪರ್ಕಿಸಲು ಸೂಚಿಸಿದೆ.

Ranganath

(ಎಸ್.ವಿ. ರಂಗನಾಥ)
ಮುಖ್ಯ ಕಾರ್ಯದರ್ಶಿಗಳು
ಕರ್ನಾಟಕ ಸರ್ಕಾರ

ಇವರಿಗೆ,

1. ಸರ್ಕಾರದ ಎಲ್ಲಾ ಅಪರ ಮುಖ್ಯ ಕಾರ್ಯದರ್ಶಿಗಳು ಮತ್ತು ಪ್ರಧಾನ ಕಾರ್ಯದರ್ಶಿಗಳು / ಸರ್ಕಾರದ ಕಾರ್ಯದರ್ಶಿಗಳು.
2. ನಿರ್ದೇಶಕರು ಮತ್ತು ಮಹಾ ನಿರೀಕ್ಷಕರು, ಕರ್ನಾಟಕ ರಾಜ್ಯ ಪೊಲೀಸ್, ಬೆಂಗಳೂರು.
3. ಪ್ರಾದೇಶಿಕ ಆಯುಕ್ತರು, ಬೆಂಗಳೂರು, ಮೈಸೂರು, ಬೆಳಗಾಂ ಮತ್ತು ಗುಲಬರ್ಗಾ ವಿಭಾಗಗಳು.
4. ಎಲ್ಲಾ ಜಿಲ್ಲಾ ಚುನಾವಣಾಧಿಕಾರಿಗಳು ಮತ್ತು ಜಿಲ್ಲಾಧಿಕಾರಿಗಳು.
5. ಎಲ್ಲಾ ಇಲಾಖಾ ಮುಖ್ಯಸ್ಥರು.
6. ರಾಜ್ಯದ ಎಲ್ಲಾ ಉಪ ವಿಭಾಗಾಧಿಕಾರಿಗಳು.
7. ಎಲ್ಲಾ ವಿಧಾನಸಭಾ ಕ್ಷೇತ್ರದ ಚುನಾವಣಾಧಿಕಾರಿಗಳು ಮತ್ತು ಸಹಾಯಕ ಚುನಾವಣಾಧಿಕಾರಿಗಳು.
8. ರಾಜ್ಯದ ಎಲ್ಲಾ ತಹಸೀಲ್ದಾರರು.
9. ಮು.ಚು.ಅ. ರವರ ಆಪ್ತ ಕಾರ್ಯದರ್ಶಿ, ಸಿ.ಆ.ಸು.ಇ. (ಚುನಾವಣೆಗಳು).
10. ರಕ್ಷಾ ಕಡತ.

## ಹಿಂಬರಹ

ಸಂಖ್ಯೆ: ಡಿಟಿಇ 2 ಇಎಸ್‌ಟಿ(9) 2013, ದಿನಾಂಕ: 05-04-2013

ಮೇಲ್ಕಂಡ ಸರ್ಕಾರಿ ಸುತ್ತೋಲೆಯ ಪ್ರತಿಯನ್ನು ಮಾಹಿತಿಗಾಗಿ ಹಾಗೂ ಮುಂದಿನ ಕ್ರಮಕ್ಕಾಗಿ ಈ ಕೆಳಕಂಡವರಿಗೆ ಕಳುಹಿಸಿಕೊಡಲಾಗಿದೆ.

1) ಈ ಇಲಾಖೆಗೆ ಅಧೀನಕ್ಕೊಳಪಡುವ ಎಲ್ಲಾ ಸರ್ಕಾರಿ/ಅನುದಾನಿತ ಇಂಜಿನಿಯರಿಂಗ್ ಕಾಲೇಜುಗಳು, ಸರ್ಕಾರಿ/ಅನುದಾನಿತ ಪಾಲಿಟೆಕ್ನಿಕ್‌ಗಳು, ಸರ್ಕಾರಿ ಕಿರಿಯ ತಾಂತ್ರಿಕ ಶಾಲೆಗಳು, ಸ್ಟೆರಿಕ್ ಸಂಸ್ಥೆ, ಬೆಂಗಳೂರು, ಸರ್ಕಾರಿ ಗಣಿ ಶಿಕ್ಷಣ ಶಾಲೆ, ಕೆ.ಜಿ.ಎಫ್ ಸಂಸ್ಥೆಗಳ ಪ್ರಿನ್ಸಿಪಾಲರುಗಳಿಗೆ ಮಾಹಿತಿಗಾಗಿ
2) ಈ ನಿರ್ದೇಶನಾಲಯದ ಎಲ್ಲಾ ಅಧಿಕಾರಿಗಳಿಗೆ ಹಾಗೂ ಸಾರ್ವಜನಿಕ ಸಂಪರ್ಕಾಧಿಕಾರಿಗಳಿಗೆ ಮಾಹಿತಿಗಾಗಿ
3) ನಿರ್ದೇಶನಾಲಯದ ಎಲ್ಲಾ ಸಿಬ್ಬಂದಿಯವರಿಗೆ ಮಾಹಿತಿಗಾಗಿ.
4) ನಿರ್ದೇಶನಾಲಯದ ನಗದು ವಿಭಾಗಕ್ಕೆ ಮಾಹಿತಿಗಾಗಿ.
5) ಇ-ಆಡಳಿತ ವಿಭಾಗಕ್ಕೆ ಮಾಹಿತಿಗಾಗಿ ಹಾಗೂ ಮುಂದಿನ ಕ್ರಮಕ್ಕಾಗಿ.

O/c

ಆಡಳಿತಾಧಿಕಾರಿ.

6) ಸಹಾಯಕ ಆಡಳಿತಾಧಿಕಾರಿಗಳು :-

7) ಸಾರ್ವಜನಿಕ ಸಂಪರ್ಕಾಧಿಕಾರಿಗಳು :-

ರವಾನಿಸಿದೆ
ನಂ. 110
ದಿ. 9/4/2013
ಇಂದ.

P est(9)-G.O.